**ಮೋಟಾರು ವಾಹನ ಅಪಘಾತಗಳ ಪರಿಹಾರ ಮಂಡಳಿ, ಬೆಂಗಳೂರು,**
**1ನೇ ಲಘು ವ್ಯವಹಾರಗಳ ನ್ಯಾಯಾಲಯ ಮತ್ತು ಎ.ಸಿ.ಜೆ.ಎಂ. ನ್ಯಾಯಾಲಯ ಬೆಂಗಳೂರು**
**ಎಂ.ವಿ.ಸಿ.ಃ 8744/2023**

ಪಿ.ಡಬ್ಲೂ **3**

| | | |
|---|---|---|
| **ಸಾಕ್ಷಿದಾರರ ಹೆಸರು** | ಃ | ದೇವೆಂದ್ರ ಕುಮಾರ್ |
| **ತಂದೆಯ ಹೆಸರು** | ಃ | ಭೋಜರಾಜ |
| **ವಯಸ್ಸು** | ಃ | **43** ವರ್ಷ |
| **ಉದ್ಯೋಗ** | ಃ | ವೈದ್ಯರು, ಮಣಿಪಾಲ್ ಆಸ್ಪತ್ರೆ |
| **ವಾಸ ಸ್ಥಳ** | ಃ | ಬೆಂಗಳೂರು |

**ದಿನಾಂಕಃ 27.03.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಮಾನ್ಯ ವಕೀಲರಿಂದ.**

ನ್ಯಾಯಾಲಯದಿಂದ ಸಮನು ಬಂದ ಕಾರಣ ನಾನು ಈ ದಿನ ನ್ಯಾಯಾಲಯಕ್ಕೆ ಹಾಜರಾಗಿ ಸಾಕ್ಷ್ಯ ನುಡಿಯುತ್ತಿದ್ದೇನೆ ಮತ್ತು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರುಪಡಿಸುತ್ತಿದ್ದೇನೆ .

ಮೆಡಿಕಲ್ ಬಿಲ್ಲುಗಳನ್ನು ನಿಪಿ 23 ಎಂದು ಗುರುತಿಸಲಾಯಿತು.

ಮೆಡಿಕಲ್ ಬಿಲ್ಲುಗಳ ಮೊತ್ತವನ್ನು ನಗದು ಮತ್ತು ವರ್ಗಾವಣೆಯ ಮೂಲಕ ಮಾಡಿರುತ್ತಾರೆ. ಗಾಯಾಳುವಾದ ಕುಶಾಲ್ ದಿನಾಂಕ 07.11.2023ರಂದು 7.11 ಕ್ಕೆ ಆಸ್ಪತ್ರೆಗೆ ದಾಖಲಾಗಿದ್ದು, ಅದೇ ದಿನ ಈ.ಆರ್ ನಿಂದ ರಾತ್ರಿ 9.50 ಗಂಟೆಗೆ ಬಿಡುಗಡೆಯಾಗಿ ಮತ್ತೇ ಅದೇ ದಿನಾಂಕದಂದು

8.11 ಗಂಟೆಗೆ ದಾಖಲಾಗಿರುತ್ತಾರೆ. ನಂತರದಲ್ಲಿ ದಿನಾಂಕ 09.11.2023ರಂದು ಬಿಡುಗಡೆಗೊಂಡಿರುತ್ತಾರೆ.

**<u>ಪಾಟೀ ಸವಾಲುಃ 2ನೇ ಎದುರುದಾರರ ಪರ ಮಾನ್ಯ ವಕೀಲರಿಂದ.</u>**

ಸಾಮಾನ್ಯವಾಗಿ ಗಾಯಾಳು ಒಂದಕ್ಕಿಂತ ಹೆಚ್ಚು ದಿನಗಳು ದಾಖಲಾದಲ್ಲಿ ಒಂದು ಒಳರೋಗಿ ಬಿಲ್ಲು ನೀಡುತ್ತಿರೋ ಅಥವಾ ಅದಕ್ಕಿಂತ ಹೆಚ್ಚಿ ನ ಬಿಲ್ಲು ನೀಡುತ್ತಿರೋ ಎಂದರೆ ಸಾಕ್ಷಿಯು ಒಳರೋಗಿ ಮತ್ತು ತುರ್ತು ಚಿಕಿತ್ಸಾ ಘಟಕಗಳು ಬೇರೆ ಬೇರೆ ಆಗಿದ್ದು, ಸಂಬಂಧಪಟ್ಟ ಘಟಕದಲ್ಲಿ ದಾಖಲಾಗಿ ಬಿಡುಗಡೆಗೊಂಡ ನಂತರ ಅದಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಬಿಲ್ಲು ನೀಡಲಾಗುತ್ತದೆ ಎಂದು ನುಡಿಯುತ್ತಾರೆ. ಅಂತಿಮ ಬಿಲ್ಲಿನ ಮೊತ್ತ ರೂ.3,68,378/- ಆಗಿದ್ದು, ರೂ.80,842/- ಗಳನ್ನು ರಿಯಾಯಿತಿ ನೀಡಿರುತ್ತೇವೆ. ರೂ.2,88,136/- ಮತ್ತು ರೂ.61,864/- ಗಳನ್ನು ಅಂತಿಮ ಐಪಿ ಬಿಲ್ಲಿನ ಮೊತ್ತವಾಗಿ ಪಾವತಿ ಮಾಡಿರುತ್ತಾರೆ ಎಂದರೆ ಸರಿ. ನಿಪಿ 23 ಕ್ಕೆ ಸಂಬಂಧಪಟ್ಟಂತೆ ಗಾಯಾಳು ಒಟ್ಟು ರೂ.3,50,000/- ಗಳನ್ನು ಪಾವತಿಸಿರುತ್ತಾರೆ ಎಂದರೆ ಸರಿ. ಆನ್ ಲೈನ್ ಮತ್ತು ಅದೇ ಮಾದರಿಯಲ್ಲಿ ಯಾರು ಹಣವನ್ನು ಪಾವತಿಸಿದರು ಎಂದು ತೋರಿಸಲು ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನಿಪಿ 23 ರ ಆಧಾರದ ಮೇರೆಗೆ ಗಾಯಾಳುವಿನ ಕುಟುಂಬದವರೇ ಬಿಲ್ಲಿನ ಮೊತ್ತ ಪಾವತಿಸಿದ್ದಾರೆ ಎಂದು ಹೇಳಲು ಆಗುವುದಿಲ್ಲ. ಆನ್ ಲೈನ್ ಮತ್ತು ಅದೇ ಮಾದರಿಯಲ್ಲಿ ಯಾರು ಹಣವನ್ನು ಪಾವತಿಸಿದರು ಎಂದು ತೋರಿಸಲು ಇರುವ ದಾಖಲಾತಿಯನ್ನು ಹಾಜರುಪಡಿಸಲು ಆಸ್ಪತ್ರೆಯಲ್ಲಿ ಪರಿಶೀಲಿಸಿ ಹೇಳಬೇಕಾಗುತ್ತದೆ. ಆಸ್ಪತ್ರೆಗೆ ಹಣವನ್ನು ಯಾವುದೇ ರೂಪದಲ್ಲಿ ಪಾವತಿ ಮಾಡಿದಲ್ಲಿ ಆ ಬಗ್ಗೆ ರಶೀದಿ ನೀಡುತ್ತಾರೆ.

ಪಿ.ಡಬ್ಲೂ **3**

ಗಾಯಾಳುವಿನ ಕುಟುಂಬದವರು ಬಿಲ್ಲಿನ ಮೊತ್ತವನ್ನು ಪಾವತಿಸಿದಲ್ಲಿ ರಶೀದಿ ಅವರ ಬಳಿ ಇರುತ್ತದೆ ಎಂದರೆ ಸಾಕ್ಷಿಯು ಸಾಮಾನ್ಯವಾಗಿ ರಶೀದಿ ನೀಡುತ್ತೇವೆ, ಅವರ ಬಳಿ ಇರಬಹುದು ಎಂದು ನುಡಿಯುತ್ತಾರೆ. ನಾವು ಮೊದಲ ಬಾರಿಗೆ ಮೂಲ ಬಿಲ್ಲನ್ನು ನೀಡುತ್ತೇವೆ, ನಂತರದಲ್ಲಿ ಬಿಲ್ಲು ಕೇಳಿದಲ್ಲಿ ದ್ವಿಪ್ರತಿ ಬಿಲ್ಲನ್ನು ನೀಡುತ್ತೇವೆ. ಮೂಲ ಬಿಲ್ಲಿನ ಆಧಾರದ ಮೇರೆಗೆ ಮರುಪಾವತಿ ಪಡೆಯುವ ಸಾಧ್ಯತೆ ಇದೆ ಎಂದರೆ ಅದು ಕಂಪನಿಯಿಂದ ಕಂಪನಿಗೆ ಅವಲಂಬಿತ ಆಗಿರುತ್ತದೆ ಎಂದು ನುಡಿಯುತ್ತಾರೆ. ನಿಪಿ 23 ಬಿಲ್ಲಿನ ದ್ವಿಪ್ರತಿ ಎಂದರೆ ಸರಿ. ಮೂಲ ಬಿಲ್ಲನ್ನು ಗಾಯಾಳುವಿನ ಕುಟುಂಬದವರಿಗೆ ನೀಡಿರುತ್ತೇವೆ. ಗಾಯಾಳುವಿನ ಕುಟುಂಬದವರು ಬಿಲ್ಲಿನ ಮೊತ್ತವನ್ನು ಪಾವತಿಸಿರುವುದಿಲ್ಲ ಹಾಗೂ ಅದನ್ನು ಯಾವುದೋ ವ್ಯಕ್ತಿ ಪಾವತಿಸಿರುತ್ತಾರೆ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**(ಓ.ಹೇ.ಕೇ.ಸ.ಇ.)**

**1ನೇ ಎಸ್‌ಸಿಜೆ ಮತ್ತು ಎಸಿಜೆಎಮ್**

**ಬೆಂಗಳೂರು**